ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (8) ರಲ್ಲಿ ಪ್ರಸ್ತಾವಿತ ಸಂಸ್ಥೆಗೆ ನಿಗಧಿ ಪಡಿಸಲಾಗಿರುವ ರೂ.10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 9–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 6)ವಿಷಯದ ಸಂಖ್ಯೆ :–ತೆಆಸ್ಥಾಸ/110/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)62/10–11 ದಿನಾಂಕ:09–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಆರ್. ರೋಷನ್ ಬೇಗ್, ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ. ರವರು ಪೂಜ್ಯ ಮಹಾಪೌರರಿಗೆ ಪತ್ರ ಬರೆದು, ಹಳೆನಾಗ ಥಿಯೇಟರ್ ಹಿಂಭಾಗ, ಆಸ್ಟಿನ್ ರಸ್ತೆ, ಮನೆ ನಂ. 45 ರಲ್ಲಿ ವಾಸವಾಗಿರುವ ಶ್ರೀ ಟಿ. ರಮೇಶ್, ವಿಕಲಚೇತನ ರಾಷ್ಟ್ರೀಯ ಬ್ಯಾಡ್ಮಿಂಟನ್ ಕ್ರೀಡಾಪಟು, ರವರು ತಮಗೆ ಪರಿಚಿತರೆಂದು, ಸದರಿಯವರು ಬಡವರಾಗಿದ್ದು, ಇಸ್ರೇಲ್ ಓಪನ್ 2010 ವಿಕಲಚೇತನ ಬ್ಯಾಟ್ಮಿಂಟನ್ ಪಂದ್ಯಾವಳಿಯಲ್ಲಿ ದಿನಾಂಕ 2010, ನವೆಂಬರ್ 24 ರಿಂದ 29 ರವರೆಗೆ Tel Aviva, Israel ನಲ್ಲಿ ನಡೆಯುವ ಪುರುಷರ ಸಿಂಗಲ್ ಮತ್ತು ಡಬಲ್ಸ್ STL 1 class ನಲ್ಲಿ ಭಾಗವಹಿಸಲು ಆಹ್ವಾನ ಬಂದಿದ್ದು, ಸದರಿ

ಪಂದ್ಯಾವಳಿಯಲ್ಲಿ ಭಾಗವಹಿಸಲು ಸ್ವಂತ ಖರ್ಚಿನಲ್ಲಿ ಹೋಗಿ ಬರಬೇಕಾಗಿರುವುದರಿಂದ ಪಾಲಿಕೆ ವತಿಯಿಂದ ಸಹಾಯಧನ ಮಂಜೂರು ಮಾಡಬೇಕಾಗಿ ಕೋರಿರುತ್ತಾರೆ.

ಮಾನ್ಯ ಶಾಸಕರು ತಮ್ಮ ಪತ್ರದೊಂದಿಗೆ ಕ್ರೀಡಾಪಟುವಿನ ಮನವಿ ಮತ್ತು Badminton Sports Association of India for Challenged ವತಿಯಿಂದ ಇಸ್ರೇಲ್ ಓಪನ್ 2010 ರ ಬ್ಯಾಟ್ಮಿಂಟನ್ ಪಂದ್ಯಾವಳಿಯಲ್ಲಿ ಭಾಗವಹಿಸಲು ಬಂದಿರುವ ಆಹ್ವಾನ ಪತ್ರ ಹಾಗೂ ಹಲವಾರು ಪಂದ್ಯಾವಳಿಗಳಲ್ಲಿ ಭಾಗವಹಿಸಿ ಪದಕ ಪಡೆದಿರುವ ಕುರಿತಾದ ಪತ್ರಿಕಾ ವರದಿಗಳು ಮತ್ತು ಕ್ರೀಡಾ ಸಾಧನೆಗಳ ಕುರಿತಾದ ವಿವರಗಳನ್ನು ಒದಗಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ.47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಕ್ರೀಡಾಪಟುವಿಗೆ ರೂ.10,000/- (ರೂ.ಹತ್ತು ಸಾವಿರಗಳು ಮಾತ್ರ) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ : 9-12-2010ರ ಟಿಪ್ಪಣಿಯನ್ನು ಒಪ್ಪಿದೆ.**



## 7)ವಿಷಯದ ಸಂಖ್ಯೆ :-ತೆಆಸ್ಥಾಸ/111/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)66/10-11 ದಿನಾಂಕ: 09-12-2010 ರಲ್ಲಿ ವಿವರಿಸಿರುವಂತೆ, ಶ್ರೀ ಶಾರದ ನಾಯಕ್, ಕಾರ್ಯದರ್ಶಿ, ಲಲಿತಾ ಕಲಾಕ್ಷೇತ್ರ (ರಿ), ನಂ. 140, 4ನೇ ಕ್ರಾಸ್, 7ನೇ ಮೈನ್, 3ನೇ ಫೇಸ್, ಜೆ.ಪಿ. ನಗರ, ಬೆಂಗಳೂರು - 560 078. ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಕಲಾಕ್ಷೇತ್ರವು 12ನೇ ಮೇ 1976 ರಲ್ಲಿ ಸ್ಥಾಪಿತವಾಗಿ ಇದುವರೆವಿಗೂ ನೃತ್ಯ ಸಂಗೀತ ಮುಂತಾದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹೆಸರಾಂತ ಕಲಾವಿದರುಗಳಿಂದ ಪ್ರತಿ ಜಿಲ್ಲೆಗಳಲ್ಲೂ ಏರ್ಪಡಿಸುತ್ತಾ ಬಂದಿರುವುದಾಗಿ ತಿಳಿಸಿದ್ದಾರೆ. ಹಾಗೂ ತಮ್ಮ ಸಂಸ್ಥೆಯ ಕಾರ್ಯದರ್ಶಿಗಳು ಮತ್ತು ಅನೇಕ ಆಡಳಿತ ವರ್ಗದವರೆಲ್ಲರೂ ಸಹ ಕಲಾವಿದರಾಗಿದ್ದು, ಪರಿಶಿಷ್ಟ ಪಂಗಡಕ್ಕೆ (ವರ್ಗ)ಕ್ಕೆ ಸೇರಿರುವುದಾಗಿದ್ದು, ನೃತ್ಯ ಮತ್ತು ಸಂಗೀತದ ಶಾಲೆಗಳನ್ನು ನಡೆಸಿ ಅನೇಕ ಮಂದಿಗೆ ತರಬೇತಿಯನ್ನು ಕೊಡುತ್ತಿರುವುದಾಗಿ ತಿಳಿಸಿ, ತಮ್ಮ ಸಂಸ್ಥೆ ವತಿಯಿಂದ "ಸಾಂಸ್ಕೃತಿಕ ಹಬ್ಬ"ದ ಆಚರಣೆಯನ್ನು 1 ಮತ್ತು 2ನೇ ನವೆಂಬರ್ 2010 ರ ಎರಡು ದಿನಗಳ ಕಾಲ ಬೆಂಗಳೂರಿನ ಕುವೆಂಪು ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದು, ಜೊತೆಗೆ ಪ್ರತಿಯೊಂದು ಕ್ಷೇತ್ರದ ಗಣ್ಯರನ್ನು ಸನ್ಮಾನಿಸಲು ತೀರ್ಮಾನಿ, ಒಬ್ಬ ಕಲಾ ವಿಮರ್ಶಕರು, ಒಬ್ಬ ಸಂಗೀತ ಕಲಾವಿದರು, ಒಬ್ಬ ನೃತ್ಯ ಕಲಾವಿದರು, ಒಬ್ಬರು ವಾದ್ಯ ಸಂಗೀತದವರನ್ನು ಸುಮಾರ 4-5 ಮಂದಿಯನ್ನು ಈ ಸಂದರ್ಭದಲ್ಲಿ ಸನ್ಮಾನಿಸುತ್ತಿದ್ದು, ಈ ಕಾರ್ಯಕ್ರಮಕ್ಕೆ ತಗಲುವ ಅಂದಾಜು ಸುಮಾರು ರೂ.5.00 ಲಕ್ಷಗಳನ್ನು ಪಾಲಿಕೆ ವತಿಯಿಂದ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ

ರೂ.176.50 ಲಕ್ಷಗಳ ಪೈಕಿ ರೂ.47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ.10,000/- (ರೂ.ಹತ್ತು ಸಾವಿರಗಳು ಮಾತ್ರ) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ : 9-12-2010ರ ಟಿಪ್ಪಣಿಯನ್ನು ಒಪ್ಪಿದೆ.**

**8)ವಿಷಯದ ಸಂಖ್ಯೆ :-ತೆಆಸ್ಥಾಸ/112/2010-11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)65/10-11 ದಿನಾಂಕ: 09-12-2010 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು ಕರ್ನಾಟಕ ರಕ್ಷಣಾ ವೇದಿಕೆಯ ವತಿಯಿಂದ ದಿ: 20-11-2010 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ದಶಮಾನೋತ್ಸವದ ಹಾಗೂ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದ ಜೊತೆಗೆ "ಕನ್ನಡ ನುಡಿ" ಹಬ್ಬವನ್ನು ಆಚರಿಸುತ್ತಿರುವುದರಿಂದ 2010-11 ನೇ ಸಾಲಿನ ಆಯವ್ಯಯದ ಸಂಘ ಸಂಸ್ಥೆಗಳಿಗಾಗಿ ಮೀಸಲಿಟ್ಟಿರುವ ಅನುದಾನದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಗೆ ರೂ.10.00 ಲಕ್ಷಗಳನ್ನು ಕಾಯ್ದಿರಿಸಲಾಗಿರುವ ಅನುದಾನವನ್ನು ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪ್ರಸಕ್ತ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. 76 ಸಂಘ ಸಂಸ್ಥೆಗಳ ಪೈಕಿ ಟಿ.ಎ. ನಾರಾಯಣ ಗೌಡ, ರಾಜ್ಯಾಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ, ನಂ, 25, ಪ್ರವೀಣ್ ಕಟ್ಟಡ, 2ನೇ ಮಹಡಿ, 5ನೇ ಮುಖ್ಯರಸ್ತೆ, ಗಾಂಧಿನಗರ ಬೆಂಗಳೂರು-09 ರವರಿಗೆ ಕ್ರ.ಸಂ. (13) ರಲ್ಲಿ ರೂ.10.00 ಲಕ್ಷಗಳ ಅನುದಾನವನ್ನು ನಿಗಧಿ ಪಡಿಸಲಾಗಿರುತ್ತದೆ.



ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (13) ರಲ್ಲಿ ಪ್ರಸ್ತಾವಿತ ಸಂಸ್ಥೆಗೆ ನಿಗಧಿ ಪಡಿಸಲಾಗಿರುವ ರೂ.10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ : 9-12-2010ರ ಟಿಪ್ಪಣಿಯನ್ನು ಒಪ್ಪಿದೆ.**

**9)ವಿಷಯದ ಸಂಖ್ಯೆ :-ತೆಆಸ್ಥಾಸ/113/2010-11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)63/10–11 ದಿನಾಂಕ: 09–12–2010 ರಲ್ಲಿ ವಿವರಿಸಿರುವಂತೆ, ಶ್ರೀ ವಿನೋದ್ ಪ್ರಕಾಶ್, ಕಾರ್ಯದರ್ಶಿ, ಸಕ್ಷಮ, ಮಾದವಸ್ಮೃತಿ, ನಂ. 17, ಕೆ.ಕೆ.ಲೇನ್, ಕಾಟನ್ ಪೇಟೆ, ಬೆಂಗಳೂರು – 560 053. ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ತಮ್ಮ ಮಂಡಲಿಯು ಒಂದು ರಾಷ್ಟ್ರೀಯ ಮಟ್ಟದ ಸ್ವಯಂ ಸೇವಾ ಸಂಸ್ಥೆಯಾಗಿದ್ದು, ಅಂಧ ಬುದ್ಧಿಮಾಂದ್ಯ ಮತ್ತು ವಿಕಲಚೇತನ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ಈ ಮಕ್ಕಳಿಗೆ ಸಮಾಜದಲ್ಲಿ ಉತ್ತಮ ಸ್ಥಾನ–ಮಾನ ಕಲ್ಪಿಸಿ, ಆರ್ಥಿಕವಾಗಿ ಸಭಲರಾಗಿ ತಮ್ಮ ಕನಸ್ಸನ್ನು ನನಸಾಗಿಸಿಕೊಳ್ಳಲು ಪ್ರೋತ್ಸಾಹಿಸುತ್ತಾ, ಅವರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವುದಾಗಿ ತಿಳಿಸಿ, ತಮ್ಮ ಸಂಸ್ಥೆ ವತಿಯಿಂದ ರಾಷ್ಟ್ರೀಯ ಮಟ್ಟದ ದಕ್ಷಿಣ ಭಾರತದ ಅಂಧ ಮಕ್ಕಳ ಚೆಕ್ ಪಂದ್ಯಾವಳಿಯನ್ನು ನಡೆಸುತ್ತಿರುವುದಾಗಿಯೂ, ಹಾಗೂ ಇದರ ಜೊತೆಗೆ ರಕ್ತ ದಾನ ಶಿಬಿರ, ನೇತ್ರ ದಾನ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮ, ಡಾ|| ಪಂಡಿತ್ ಪುಟ್ಟರಾಜ ಗವಾಯಿ ರವರು ಸಂಗೀತ ಸಾಧನೆ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ನವೆಂಬರ್ 20 ರಿಂದ 23 ರವರೆಗಿನ 4 ದಿನಗಳ ಕಾಲ ಬೆಂಗಳೂರಿನಲ್ಲಿ ನಡೆಸುತ್ತಿರುವುದಾಗಿ ಈ ಕಾರ್ಯಕ್ರಮಕ್ಕೆ ಸುಮಾರು 700 ಜನರು ಭಾಗವಹಿಸುತ್ತಿದ್ದು, ಕಾರ್ಯಕ್ರಮದ ಚಟುವಟಿಕೆಗಳಿಗೆ ಸುಮಾರು 6 ರಿಂದ 7 ಲಕ್ಷಗಳು ವೆಚ್ಚವಾಗಲಿದ್ದು, ಪಾಲಿಕೆ ವತಿಯಿಂದ ಅನುದಾನ ಮಂಜೂರು ಮಾಡಿ ಅಂದ ಮಕ್ಕಳನ್ನು ಪ್ರೋತ್ಸಾಹಿಸಬೇಕೆಂದು ಕೋರಿರುತ್ತಾರೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರು ಪತ್ರ ಬರೆದು ಪೂಜ್ಯ ಮಹಾಪೌರರು ಪ್ರಸ್ತಾವಿತ ಸಂಸ್ಥೆಗೆ ರೂ.5.00 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡುವಂತೆ ಸಮಿತಿಗೆ ಒಕ್ಕಣೆ ಬರಿದಿರುತ್ತಾರೆಂದು, ಅದರಂತೆ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ.47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಮಾರ್ಗಸೂಚಿಗಳನ್ವಯ ಸದರಿ ಸಂಸ್ಥೆಗೆ ರೂ.10,000/– (ರೂ.ಹತ್ತು ಸಾವಿರಗಳು ಮಾತ್ರ) ಸಹಾಯ ಧನವನ್ನು ಮಂಜೂರು ಮಾಡುಲು ಅವಕಾಶವಿರುತ್ತದೆ. ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 9–12–2010ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ:5–00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ತೀರ್ಮಾನಿಸಲಾಯಿತು.**



## 10)ವಿಷಯದ ಸಂಖ್ಯೆ :–ತೆಆಸ್ಥಾಸ/114/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ/ಆ)ಪಿಎಸ್‌ಆರ್(4)38/10–11 ದಿನಾಂಕ: 09–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಶಂಕರ್, ಪ್ರಧಾನ ಕಾರ್ಯದರ್ಶಿ, ಶ್ರೀ ಆನಂದ ಲಿಂಗೇಶ್ವರ ಕ್ಷೇತ್ರ ಟ್ರಸ್ಟ್ (ರಿ), ಆನಂದಗಿರಿ ಬೆಟ್ಟ, ಚೋಳನಾಯಕನ ಹಳ್ಳಿ, ಹೆಬ್ಬಾಳ. 96ನೇ ವಾರ್ಡ್, ಆರ್.ಟಿ. ನಗರ ಅಂಚೆ, ಬೆಂಗಳೂರು – 560032. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಟ್ರಸ್ಟ್ ವತಿಯಿಂದ ಪ್ರತಿ ವರ್ಷವೂ ಬಡ ವಿದ್ಯಾರ್ಥಿಗಳಿಗೆ ಓದುವ ಪುಸ್ತಕ, ನೋಟ್ ಬುಕ್ಸ್ ವಿತರಣೆ ಮಾಡುವುದು, ಯೋಗಾಭ್ಯಾಸ, ಬೇಸಿಗೆ ಶಿಬಿರ, ರಕ್ತದಾನ ಶಿಬಿರ, ಮುಂತಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮತ್ತು ಭರತನಾಟ್ಯ, ಭಜನೆ, ನಾಟಕ, ಯಕ್ಷಗಾನ, ಸಂಗೀತ, ಜಾನಪದ ಗೀತೆಗಳು, ವಚನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುವುದಾಗಿ ಹಾಗೂ ಉಚಿತ ವಿವಾಹ, ಸಾಂಪ್ರಾದಾಯ ಆಟಗಳನ್ನು ಏರ್ಪಡಿಸುವುದು, ಸ್ಥಳೀಯ ಜನತೆಗೆ ನಾಗರೀಕ ಸೌಲಭ್ಯಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಸ್ಥಳೀಯ ಜನರಿಗೆ ನೆರವು ನೀಡುವುದು, ಕಡಿಮೆ ವೆಚ್ಚದಲ್ಲಿ ಪ್ರವಾಸ ಏರ್ಪಡಿಸುವುದು, ಆರೋಗ್ಯ ಕಾರ್ಯಕ್ರಮಗಳು, ಶಾಲೆಗಳಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸುವುದು, ಸಿಹಿ ತಿಂಡಿ

ಹಂಚುವುದು, ಬಾವೈಕ್ಯ ಸಭೆಗಳನ್ನು ಏರ್ಪಡಿಸುವುದು, ಬಡ ರೋಗಿಗಳಿಗೆ ದಾನಿಗಳಿಂದ ಉಚಿತ ಔಷಧಿ ವಿತರಿಸುವುದು, ಹಿರಿಯ ನಾಗರೀಕರಿಗೆ ಗುರುತಿನ ಚೀಟಿ ಮಾಡಿಸಿಕೊಡುವುದು, ಉಚಿತ ಬಸ್ ಪಾಸ್‌ಗಳನ್ನು ಮಾಡಿಸಿಕೊಡುವುದು ಮತ್ತು ಇನ್ನಿತರೇ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುವುದರಿಂದ ಪಾಲಿಕೆ ವತಿಯಿಂದ ಅನುದಾನವನ್ನು ಬಿಡುಗಡೆ ಮಾಡಿ ಅಭಿವೃದ್ಧಿ ಕಾರ್ಯಕ್ರಮಗಳು ಸುಗಮವಾಗಿ ನಡೆಯಲು ಸಹಾಯ ಸಹಕಾರ ನೀಡಬೇಕೆಂದು, ರೂ.6.50 ಲಕ್ಷಗಳ ಅಂದಾಜು ಪಟ್ಟಿಯನ್ನು ಒದಗಿಸಿ ಧನ ಸಹಾಯ ಕೋರಿರುತ್ತಾರೆ.

ಮುಂದುವರೆದಂತೆ, ಪ್ರಸ್ತಾವಿತ ಟ್ರಸ್ಟ್‌ಗೆ 2009–10ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕ ಶೀರ್ಷಿಕೆಯಡಿ ರೂ.5.00 ಲಕ್ಷಗಳನ್ನು ಮೀಸಲಿರಿಸಲಾಗಿತ್ತು. ಆದರೆ, ಉತ್ತರ ಕರ್ನಾಟಕದಲ್ಲಿ ಅತಿವೃಷ್ಟಿ ಮಳೆಯಿಂದ ಸಂತ್ರಸ್ಥರಾದವರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಪಾಲಿಕೆ ವತಿಯಿಂದ ನೀಡಿದ ಸಹಾಯಧನದಲ್ಲಿ ಈ ಲೆಕ್ಕ ಶೀರ್ಷಿಕೆಯಡಿ ಮೀಸಲಿಟ್ಟದ್ದ ಮೊತ್ತವನ್ನು ಸಹ ಸೇರಿಸಿ ನೀಡಲಾಗಿದ್ದರ ಹಿನ್ನೆಲೆಯಲ್ಲಿ ಸದರಿ ಟ್ರಸ್ಟ್‌ನವರಿಗೆ ಧನ ಸಹಾಯ ಬಿಡುಗಡೆ ಮಾಡಿರುವುದಿಲ್ಲ. ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಮಿತಿಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ.16.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಪ್ರಸ್ತಾವಿತ ಸಮಿತಿಗೆ ಮಾರ್ಗ ಸೂಚಿಗಳನ್ವಯ ರೂ.10,000/– ಗಳ ಸಹಾಯಧನವನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣ

**ನಿರ್ಣಯ :– ಆಯುಕ್ತರ ದಿನಾಂಕ : 9–12–2010ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ:ಒಂದುವರೆ (ಅಂದರೆರೂ:150,000–00)ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ತೀರ್ಮಾನಿ ಸಲಾಯಿತು.**

**ಹೆಚ್ಚುವರಿ ವಿಷಯ:–**

1) ***ವಿಷಯದ ಸಂಖ್ಯೆ :–ತೆಆಸ್ಥಾಸ/ 16 /2010–11***

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಸ.ಆ.(ಆಸ್ತಿ)/ಪಿ.ಆರ್/647/10–11, ದಿನಾಂಕ : 12–08–2010. ರಲ್ಲಿ ವಿವರಿಸಿರುವಂತೆ, ನಗರಾಭಿವೃದ್ಧಿ ಇಲಾಖೆಯ ಪತ್ರದ ಸಂಖ್ಯೆ:ನಅಇ/85/ಎಂಎನ್‌ಜಿ/2010, ದಿನಾಂಕ : 21–07–2010 ರಲ್ಲಿ ಸರ್ಕಾರದ ದಿನಾಂಕ : 02–06–2003 ರ ಮಾರ್ಗಸೂಚಿಯಂತೆ, ನಗರ ಪಾಲಿಕೆ ಸ್ವತ್ತನ್ನು ವಿಲೇ ಮಾಡಬೇಕಾದಲ್ಲಿ ಸಾರ್ವಜನಿಕ ಹರಾಜಿನ ಮೂಲಕವೇ ವಿಲೇ ಮಾಡಬೇಕಾಗಿರುತ್ತದೆ. ಆದರೆ, ಶೇಷಾದ್ರಿಪುರಂ, ಪ್ಲಾಟ್‌ಫಾರಂ ರಸ್ತೆಯಲ್ಲಿರುವ ಕೃಷ್ಣ ಫ್ಲೋರ್ ಮಿಲ್ ಪಕ್ಕದಲ್ಲಿರುವ ನಗರಪಾಲಿಕೆ



ವಸತಿಗೃಹಗಳನ್ನು ಪಾಲಿಕೆಯ ನೌಕರರಿಗೆ ಹಂಚಿಕೆ ಮಾಡಲಾಗಿದ್ದ ವಸತಿಗೃಹಗಳೂ ವಾಸಮಾಡಲು ಯೋಗ್ಯವಿಲ್ಲದೇ ಇದ್ದು, ಕಟ್ಟಡಗಳು ಶಿಥಿಲಗೊಂಡಿರುತ್ತದೆ. ಆದುದರಿಂದ, ಸದರಿ ವಸತಿ ಗೃಹಗಳಲ್ಲಿ ವಾಸ ಮಾಡುತ್ತಿರುವ ನೌಕರರ ಕುಟುಂಬದವರಿಗೆ ಈ ಹಿಂದೆ ಸರ್ಕಾರದ ಆದೇಶ ಸಂಖ್ಯೆ : ನಅಇ/20/ಎಂಎನ್‌ಜಿ/99(8), ದಿನಾಂಕ : 15–05–2000 ರ ಆದೇಶದಂತೆ, ಪ್ಲಾಟ್‌ಫಾರಂ

ರಸ್ತೆಯಲ್ಲಿರುವ ಚಾಲಕರ ವಸತಿಗೃಹ 'ಬಿ' ಬ್ಲಾಕನ್ನು ಒಡೆದು ಹಾಕಿ, ಅಲ್ಲಿ ವಾಸಿಸುತ್ತಿರುವ ನೌಕರರಿಗೆ ನಿವೇಶನ ಅಳತೆ 15X15 ಅಡಿಗಳಂತೆ ವಿಂಗಡಿಸಿ ಹಂಚಿಕೆ ಮಾಡಲಾಗಿರುವಂತೆ ಶೇಷಾದ್ರಿಪುರಂ ಪ್ಲಾಟ್‌ಫಾರಂ ರಸ್ತೆಯಲ್ಲಿ ಹಂಚಿಕೆ ಮಾಡಿರುವ ನಾಲ್ಕು ವಸತಿಗೃಹಗಳನ್ನು ಪಾಲಿಕೆಯ ನೌಕರರಿಗೂ ಸಹ ಮಾರುಕಟ್ಟೆ ದರದಂತೆ ಬೆಲೆ ವಿಧಿಸಿ ನಿಗಧಿಪಡಿಸಿಕೊಂಡ ತದನಂತರ, ನೌಕರರಿಂದ ಕಟ್ಟಡಕ್ಕೆ ತಗಲುವ ವೆಚ್ಚವನ್ನು ಪಾವತಿ ಮಾಡಿಕೊಂಡು ನಂತರ ಮುಂದಿನ ಹತ್ತು ವರ್ಷಗಳಲ್ಲಿ ಯಾರಿಗೂ ಪರಭಾರೆ ಮಾಡತಕ್ಕದ್ದಲ್ಲ ಎಂಬ ಷರತ್ತಿಗೊಳಪಟ್ಟು ಗುತ್ತಿಗೆ ಮಾರಾಟ ಮಾಡಿ ಕರಾರು ಪತ್ರ ನೋಂದಾಯಿಸಲು ದಿನಾಂಕ : 22–01–2010ರಂದು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಟಿಪ್ಪಣಿಯನ್ನು ಈ ಕೆಳಕಂಡ ಪಾಲಿಕೆಯ ನೌಕರರಿಗೆ ಮಾರಾಟ ಮಾಡಲು ಹಾಗೂ ಕ್ರಯ ಪತ್ರ ನೀಡಲು ತೀರ್ಮಾನಿಸಲಾಗಿದೆ.

| ಕ್ರ.ಸಂ | ನೌಕರರ ಹೆಸರು | ಪದನಾಮ | ಹಂಚಿಕೆ ಮಾಡಿರುವ ವಸತಿಗೃಹ ಸಂಖ್ಯೆ | ವಿಸ್ತೀರ್ಣ | ಮಾರುಕಟ್ಟೆ ದರ | ಷರಾ |
|---|---|---|---|---|---|---|
| 1 | ಶ್ರೀ ಡಿ.ಪಳನಿ | ವಾಹನ ಚಾಲಕರು | 41/1 | 55X20 ಚ.ಅಡಿ | 13,20,000.00 | |
| 2 | ಶ್ರೀ ಆರ್.ವೆಂಕಟೇಶ್ | ವಾಹನ ಚಾಲಕರು | 42/1 | 55X20 ಚ.ಅಡಿ | 13,20,000.00 | |
| 3 | ಶ್ರೀ ಎಸ್.ಶ್ರೀಧರ್ | ವಾಹನ ಚಾಲಕರು | 42/2 | 55X20 ಚ.ಅಡಿ | 13,20,000.00 | |
| 4 | ಶ್ರೀ.ಎನ್.ಎಸ್.ವೆಂಕಟೇಶ್ | ದ್ವಿತೀಯ ದರ್ಜೆ ಸಹಾಯಕರು | 41/2 | 55X20 ಚ.ಅಡಿ | 13,20,000.00 | |
| ನಾಲ್ಕು ಜನರಿಗೆ ಒಟ್ಟು ಐವತ್ತೆರಡು ಲಕ್ಷದ ಎಂಭತ್ತು ಸಾವಿರ ರೂ.ಗಳು ಮಾತ್ರ. | | | | | 52,80,000.00 | |

ಮೇಲ್ಕಂಡ ಪಾಲಿಕೆಯ ನೌಕರರಿಗೆ ಮಾರುಕಟ್ಟೆ ದರದಂತೆ, ನಿವೇಶನದ ಬೆಲೆಯನ್ನು ರೂ.1,200.00 ರಂತೆ ಚ.ಅಡಿಗೆ ನಿಗಧಿಪಡಿಸಲಾಗಿದೆ. ಸದರಿ ನಾಲ್ಕು ಜನ ನೌಕರರಿಗೆ 55X20=1,110 ಚ.ಅಡಿಗಳ ವಿಸ್ತೀರ್ಣ ವಸತಿ

ಗೃಹ ಹಂಚಿಕೆ ಮಾಡಲಾಗಿರುವ ಒಬ್ಬ ನೌಕರರರ ವಸತಿಗೃಹದ ಒಟ್ಟು 1,100 ಚ.ಅಡಿಗಳಿದ್ದ ನಿವೇಶನದ ಮಾರುಕಟ್ಟೆಯ ದರ ರೂ.13,20,000/– ಗಳಂತೆ 4–ವಸತಿಗಳ ಒಟ್ಟು 4,400 ಚ.ಅಡಿಗಳಿಗೆ ತಗಲುವ ವೆಚ್ಚ 52,80,000/– ರೂ.ಗಳಿದ್ದು, ಈ ಮೊತ್ತವನ್ನು ಪಾಲಿಕೆಯ ಖಜಾನೆಗೆ ಜಮಾ ಮಾಡಿಕೊಂಡ ನಂತರ ಸರ್ಕಾರದ ಆದೇಶದ ದಿನಾಂಕ : 15–05–2000ರಂತೆ. ಷರತ್ತು ವಿಧಿಸಿ. ಕ್ರಯಕ್ಕೆ ನೀಡಲು ಈ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಸಂಬಂಧಪಟ್ಟ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿಯ ಮುಂದೆ ಸದರಿ ಪ್ರಕರಣವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಹಾಗೂ ನಗರ ಪಾಲಿಕೆ ಸಭೆ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು(14–12–2010ರಂದು) ಆಯುಕ್ತರ ದಿನಾಂಕ:12–8–2010ರ ಟಿಪ್ಪಣಿಯನ್ನು ಒಪ್ಪಿದೆ.**

**2)ವಿಷಯದ ಸಂಖ್ಯೆ :–ತೆಆಸ್ಥಾಸ/45/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಸ.ಎ3(4)/ಪಿ.ಆರ್/92/10–11 ದಿನಾಂಕ : ದಿನಾಂಕ: 05–10–2010. ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:43ರ ಹಿಂದೂ ಬರಿಯಲ್ ಗ್ರೌಂಡ್ ಬಡಾವಣೆಯ ನಗರಪಾಲಿಕೆಯ 125+126/2X50 ಅಡಿಗಳ ಜಾಗವನ್ನು ಶ್ರೀ ಕಾವೇರಿ ಆಶ್ರಮ ವಿದ್ಯಾಸಂಸ್ಥೆಯವರಿಗೆ ವರ್ಷಕ್ಕೆ 150/– ರೂಗಳಂತೆ ಗುತ್ತಿಗೆಯನ್ನು ನಿಗದಿಪಡಿಸಿ ದಿನಾಂಕ: 05–12–1977 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ದಿನಾಂಕ: 04–12–2007ಕ್ಕೆ ಮುಕ್ತಾಯಗೊಂಡಿರುತ್ತದೆ.

ಸದರಿ ಸಂಸ್ಥೆಯವರು ದಿನಾಂಕ: 12–09–2006 ರಂದು ಮನವಿ ಸಲ್ಲಿಸಿ, ವಿದ್ಯಾಸಂಸ್ಥೆಯು 1964ರಲ್ಲಿ ಒಬ್ಬ ಶಿಕ್ಷಕಿ ಹಾಗೂ ಕೆಲವೇ ಮಕ್ಕಳಿಂದ ಪ್ರಾರಂಭವಾಗಿ ಕನ್ನಡ ಮಾಧ್ಯಮದಲ್ಲಿ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ನೀಡುತ್ತಿದ್ದು, ಇಂದು ಈ ಸಂಸ್ಥೆಯಡಿಯಲ್ಲಿ ಸುಮಾರು 1350 ಮಕ್ಕಳು ಉಚಿತವಾಗಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. 24 ಮಂದಿ ಬೋಧಕ ಸಿಬ್ಬಂದಿ ವರ್ಗದವರು ಕೆಲಸ ನಿರ್ವಹಿಸುತ್ತಿದ್ದಾರೆ. ಸದರಿ ಶಾಲೆಯಲ್ಲಿ ಅತ್ಯಂತ ಕಡುಬಡವರು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಕ್ಕಳು ಇಲ್ಲಿ ಕನ್ನಡ ಮಾಧ್ಯಮದಲ್ಲಿ ಉಚಿತ ವ್ಯಾಸಂಗ ಮಾಡುತ್ತಿರುತ್ತಾರೆ. ಈ ಹಿಂದೆ ನೀಡಿದ್ದ 30 ವರ್ಷಗಳ ಗುತ್ತಿಗೆ ಅವಧಿಯನ್ನು ಮುಂದಿನ 99 ವರ್ಷ ಅವಧಿಗೆ ಕಡಿಮೆ ಗುತ್ತಿಗೆ ದರದಲ್ಲಿ ನವೀಕರಿಸಲು ಕೋರಿರುತ್ತಾರೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ವಸತಿಗೆ ಚದರ ಅಡಿ ಒಂದಕ್ಕೆ 850 ರೂ.ಗಳಾಗಿದ್ದು, ವಾಣಿಜ್ಯಕ್ಕೆ ಚದರ ಅಡಿ ಒಂದಕ್ಕೆ 1190/–ರೂ.ಗಳಾಗಿದ್ದು, ಅರ್ಜಿದಾರರಿಗೆ ಗುತ್ತಿಗೆ ನೀಡಿರುವ ಸ್ವತ್ತಿನ ಅಳತೆ (125'+126')/2ಥ50'=6275 ಚದರ ಅಡಿಗಳಾಗುತ್ತದೆ. ಇದರಂತೆ ಸ್ವತ್ತಿನ ಮೌಲ್ಯವು 74,67,250/–ರೂ.ಗಳಾಗಿರುತ್ತದೆ. ಶೇ. 10ರಂತೆ ಪರಿಗಣಿಸಲಾಗಿ, ವಾರ್ಷಿಕ ಗುತ್ತಿಗೆ ದರವು 7,46,725/–ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ದರವು 62,227/–ರೂ.ಗಳಾಗುತ್ತದೆ.

ದಿನಾಂಕ: 01-03-2002ರ ಸುತ್ತೋಲೆಯ ಕ್ರಮ ಸಂಖ್ಯೆ:7(4) ರಂತೆ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಸ್ವತ್ತಿನ ಪ್ರಸಕ್ತ ಮಾರುಕಟ್ಟೆ ಬೆಲೆಯ ಕನಿಷ್ಟ ಶೇ.10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು ಹಾಗೂ ಕ್ರಮ ಸಂಖ್ಯೆ:7(5) ರಂತೆ ಅಂಗವಿಕಲರಿಗೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ.100 ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಾಗೂ ಸರ್ಕಾರಕ್ಕೆ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು.

ಈ ಹಿಂದೆ ಇಂತಹ ಲಾಭರಹಿತ ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿರುವ ಉದಯಭಾನು ಕಲಾ ಸಂಘ, ಕೆಂಪೇಗೌಡ ನಗರ ಮತ್ತು 51ನೇ ವಾರ್ಡಿನ ಕಟ್ಟೆ ಬಳಗಕ್ಕೂ ಕೂಡ ಮಾರುಕಟ್ಟೆ ದರದಂತೆ ಗುತ್ತಿಗೆ ನೀಡದೆ ರಿಯಾಯಿತಿ ದರದಲ್ಲಿ ಗುತ್ತಿಗೆ ನೀಡಿರುವ ಪೂರ್ವ ನಿದರ್ಶನಗಳಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿಯೂ ಮೇಲಿನ ಗುತ್ತಿಗೆಯ ದರವನ್ನು ಶೇ 50ರಷ್ಟು ಕಡಿಮೆ ಮಾಡಿ ಅಂದರೆ ಮಾಸಿಕ ಗುತ್ತಿಗೆ ಹಣ 31,114 ಎಂದು ನಿಗದಿಪಡಿಸಿ ಹಾಗೂ ಪ್ರತಿ ವರ್ಷವು ಶೇ 5 ರಷ್ಟು ಹೆಚ್ಚಿಸುವ ಷರತ್ತಿಗೆ ಒಳಪಡಿಸಿ ಗುತ್ತಿಗೆ ಅವಧಿಯನ್ನು 05-12-2007 ರಿಂದ 30 ವರ್ಷಗಳ ಅವಧಿಗೆ ನವೀಕಸುವ ಬಗ್ಗೆ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಸಭೆ ಮುಂದೆ ತೀರ್ಮಾನಕ್ಕಾಗಿ ಟಿಪ್ಪಣಿ ಮಂಡಿಸಿದೆ.

**ನಿರ್ಣಯ :-ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:14-12-2010ರಂದು ಸ್ಥಳ ಪರಿಶೀಲಿಸಲಾಯಿತು. ಶ್ರೀ.ಕಾವೇರಿ ಆಶ್ರಮ ವಿದ್ಯಾ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಸುಮಾರು 1400 ಬಡ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಉಚಿತವಾಗಿ ವ್ಯಾಸಂಗ ಮಾಡುತ್ತಿದ್ದು ಸದರೀ ಸಂಸ್ಥೆ ಲಾಭ ರಹಿತ ಸಂಸ್ಥೆಯಾಗಿರುವುದರಿಂದ ದಿನಾಂಕ:5-10-2010ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ವಾರ್ಷಿಕ ಗುತ್ತಿಗೆ ಹಣ ರೂ:1000-00 ಒಂದು ಸಾವಿರಗಳಿಗೆ ನಿಗದಿಪಡಿಸಿ ದಿನಾಂಕ:5-12-2007ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ಅವಧಿಯನ್ನು ನವೀಕರಿಸುವುದೆಂದು ಸಮಿತಿಯು ತೀರ್ಮಾನಿಸಿತು.**

**(ಪಿ.ಎನ್.ಸದಾಶಿವ)**
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# <u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 27-12-2010 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಪಿ.ಎನ್.ಸದಾಶಿವ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಕೆ.ಚಂದ್ರಶೇಖರ್ – ಸದಸ್ಯರು | ಅಪರ ಆಯುಕ್ತರು (ಕಲ್ಯಾಣ/ಆರೋಗ್ಯ/ಆಸ್ತಿಗಳು) |
| ಎನ್.ವೀರಣ್ಣ – ಸದಸ್ಯರು | ಮುಖ್ಯ ಅಭಿಯಂತರರು (ರಾಜರಾಜೇಶ್ವರಿ ನಗರ) |
| ಜಿ.ಮಂಜುನಾಥ ರಾಜು – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯಶವಂತಪುರ) |
| ಎಂ.ಜಿ.ಜಯರತ್ನ – ಸದಸ್ಯರು | ಸಹಾಯಕ ಅಭಿಯಂತರರು (ಯಶವಂತಪುರ) |
| ಶಕೀಲಾ.ಎಂ – ಸದಸ್ಯರು | ವ್ಯವಸ್ಥಾಪಕರು, ಅಪರ ಆಯುಕ್ತರು (ಕಲ್ಯಾಣ) ಕಛೇರಿ |
| ಟಿ.ಎ.ಗಾಯಿತ್ರಿ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

**<u>01]. ವಿಷಯದ ಸಂಖ್ಯೆ :-ತೆಆಸ್ಥಾಸ/106/2010-11</u>**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ/ರಾರಾನ/ಪಿಆರ್/2075/10-11 ದಿನಾಂಕ : 09-12-2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ನಗರ ಪಾಲಿಕೆಯ ಯಶವಂತಪುರ ವಾರ್ಡ್-37 ಹಳೇಯ ವಾರ್ಡ್ ಆಗಿದ್ದು, ಹೆಚ್ಚಿನ ಭಾಗವು ತಗ್ಗು ಪ್ರದೇಶದಿಂದ ಕೂಡಿರುತ್ತದೆ. ಈ ವಾರ್ಡ್‌ನಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದಿರುವ ಹರಿಜನ ಗಿರಿಜನ, ಅಲ್ಪ ಸಂಖ್ಯಾತರು ಹಾಗೂ ಹಿದುಳಿದ ವರ್ಗದ ಜನರಿಗೆ ವಸತಿ ಸಂಕೀರ್ಣವನ್ನು ಕಲ್ಪಿಸುವುದು ಅವಶ್ಯವಿರುತ್ತದೆ, ಈ ವಾರ್ಡಿನ ಪಾಲಿಕೆಯ ಸದಸ್ಯರು ವಾರ್ಡಿನ ಪರಿವೀಕ್ಷಣೆಯ ಸಮಯದಲ್ಲಿ ಸದರಿ ವಾರ್ಡ್‌ನ ಬಿ.ಕೆ.ನಗರದ 1ನೇ ಮುಖ್ಯ ರಸ್ತೆಯಲ್ಲಿರುವ ನಿವೇಶನವು ವಸತಿ ಸಂಕೀರ್ಣದ ನಿರ್ಮಾಣಕ್ಕೆ ಯೋಗ್ಯವಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಹಾಗೂ ಹಾಲಿ ವಸ್ತುಸ್ಥಿತಿಯನ್ನು ತೋರಿಸುವ ಪೋಟೋಗಳನ್ನು ಸಹ ಇದರೊಂದಿಗೆ ಲಗತ್ತಿಸಲಾಗಿದೆ. ಈ ವಿಷಯವಾಗಿ ಪಾಲಿಕೆ ಸದಸ್ಯರು ಸೂಕ್ತ ಕ್ರಮ ಕೈಗೊಳ್ಳಲು ಅವರ ಪತ್ರ ದಿನಾಂಕ 24-08-2010 ರಲ್ಲಿ ತಿಳಿಸಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ಒಟ್ಟು 32 ಯುನಿಟ್‌ಗಳ 3 ಅಂತಸ್ತಿನ ಇಂತಹ 3 ವಸತಿ ಸಂಕೀರ್ಣದ ನಿರ್ಮಾಣಕ್ಕೆ 2010-2011ರ ಸಾಲಿನಲ್ಲಿ ರೂ. 19.35 ಕೋಟಿಗಳ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಆದ್ದರಿಂದ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ 2010-2011ರ ದರಪಟ್ಟಿಯಂತೆ ಒಟ್ಟು 6 ಅಂದಾಜು ಪಟ್ಟಿಗಳನ್ನು ಮಾಡಲಾಗಿದ್ದು ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ವಾರ್ಡ್ ಸಂಖ್ಯೆ | ವಿವರಗಳು | ಅಂದಾಜು ಮೊತ್ತ ಕೋಟಿಗಳಲ್ಲಿ |
|---|---|---|---|
| 1 | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್-ಎ-1** | 3.645 |
| | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್-ಎ-1ಎ** | 2.855 |

| | |
|---|---|
| **ಒಟ್ಟು** | **6.500** |

.....2



| | | | |
|---|---|---|---|
| 2 | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಬಿ–2** | 3.753 |
| | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಬಿ–2ಎ** | 2.747 |
| | | **ಒಟ್ಟು** | **6.500** |
| 3 | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಡಿ–4** | 4.384 |
| | 37 | ಯಶವಂತಪುರದ ಬಿ.ಕೆನಗರದ 1ನೇ ಮುಖ್ಯ ರಸ್ತೆಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ವಸತಿ ಸಂಕೀರ್ಣದ ನಿರ್ಮಾಣ **ಬ್ಲಾಕ್–ಡಿ–4ಎ** | 1.966 |
| | | **ಒಟ್ಟು** | **6.350** |
| | | **ಒಟ್ಟು ಮೊತ್ತ** | **19.350** |

ಈ ಹಿನ್ನೆಲೆಯಲ್ಲಿ, ಯಶವಂತಪುರ ವಾರ್ಡ್‌ನ ಆರ್ಥಿಕವಾಗಿ ಹಿಂದುಳಿದಿರುವ ವರ್ಗದ ಜನರಿಗೆ ಒಟ್ಟು 32 ಯುನಿಟ್‌ಗಳ ಮೂರು ಅಂತಸ್ತಿನ 3 ಬ್ಲಾಕ್‌ಗಳನ್ನು ವಸತಿ ಸಂಕೀರ್ಣದ ನಿರ್ಮಾಣಕ್ಕೆ 2010–2011 ರ ಸಾಲಿನಲ್ಲಿ ರೂ. 19.35 ಕೋಟಿಗಳ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಮಾನ್ಯ ಅಯುಕ್ತರು ಮೂಲಕ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲು ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## 02]. ವಿಷಯದ ಸಂಖ್ಯೆ :–ತೆಆಸ್ಥಾಸ/115/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಬಿ12(3ಎ)ಸಿಪಿಆರ್/10/10–11 ದಿನಾಂಕ:26–11–2010ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಟ್ಟು 198 ವಾರ್ಡ್‌ಗಳನ್ನು ಹೊಂದಿದ್ದು, ಕೆಲಸಕಾರ್ಯಗಳು ದ್ವಿಗುಣಗೊಂಡಿದ್ದು, ಕೆಲವೊಮ್ಮೆ ಪೂಜ್ಯ ಮಹಾಪೌರರು ವಾರ್ಡ್‌ಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಬೇಕಾದ ಹಲವಾರು ವಿಷಯಗಳಿದ್ದು, ಕೆಲವೊಮ್ಮೆ ವಾರ್ಡ್ ಕಛೇರಿಯಿಂದಲೇ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಬೇಕಾದ ಸಂದರ್ಭ ಒದಗಿ ಬರುವುದರಿಂದ , ಪಾಲಿಕೆಯಲ್ಲಿ ಪ್ರಸ್ತುತ ಕೇವಲ ಒಬ್ಬ ಸಾರ್ವಜನಿಕ ಸಂಪರ್ಕಾಧಿಕಾರಿ ಇದ್ದು, ಪಾಲಿಕೆಯಲ್ಲಿ ಹೆಚ್ಚಿನ ಕೆಲಸ ಕಾರ್ಯಗಳ ಒತ್ತಡ ಇರುವುದರಿಂದ ಪೂಜ್ಯ ಮಹಾಪೌರರ ಕೆಲಸ ಕಾರ್ಯಗಳಿಗೆ ಆದ್ಯತೆ ನೀಡಲಾಗುವುದಿಲ್ಲ. ಆದ್ದರಿಂದ ಪೂಜ್ಯ ಮಹಾಪೌರರ ಕಛೇರಿಗಾಗಿಯೇ ಒಬ್ಬ ಪತ್ರಿಕಾ ಕಾರ್ಯದರ್ಶಿ ಇರುವುದು ಸೂಕ್ತವಾಗಿರುವ ಹಿನ್ನೆಲೆಯಲ್ಲಿ, ಶ್ರೀ ಲಿಂಗರಾಜು ರವರು ಈ ಹಿಂದೆ ಸಂಜೆವಾಣಿ ದಿನಪತ್ರಿಕೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ ಒಳ್ಳೆಯ ಅನುಭವ ಹೊಂದಿರುವುದರಿಂದ, ಪತ್ರಿಕಾ ಕಾರ್ಯದರ್ಶಿಯನ್ನಾಗಿ ನೇಮಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಪೂಜ್ಯ ಮಹಾಪೌರರು ತಮ್ಮ ಟಿಪ್ಪಣಿ ಸಂಖ್ಯೆ:ಮಪೌಕ/ಆಶಾ/392/10–11 ದಿನಾಂಕ:17–05–2010ರಲ್ಲಿ ಕೋರಿರುತ್ತಾರೆ.

ಈ ಸಂಬಂಧ ಶ್ರೀ ಲಿಂಗರಾಜು ಇವರನ್ನು ಕಾನೂನು ಕೋಶದ ಮುಖ್ಯಸ್ಥರ ವರದಿ ದಿನಾಂಕ: 01–06–2010ರ ಅನ್ವಯ 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ–20 (ಬಿ) ರನ್ವಯ ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಳ್ಳಲು ಸರ್ಕಾರದ ಪೂರ್ವಾನುಮತಿ ಪಡೆದ ನಂತರ, ಸದರಿಯವರನ್ನು ಸಂಚಿತ ವೇತನದ ಮೇಲೆ ನೇಮಿಸಿಕೊಳ್ಳಬಹುದು ಎಂದು ಅಭಿಪ್ರಾಯ ನೀಡಿರುತ್ತಾರೆ.

ಆದ್ದರಿಂದ ಶ್ರೀ ಲಿಂಗರಾಜು ರವರನ್ನು ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ನಿಯಮ–20 (ಬಿ) ರೀತ್ಯ ನೇಮಿಸಿಕೊಳ್ಳಲು ಸರ್ಕಾರದ ಅನುಮೋದನೆ ಕೋರಲು ಮಂಡಿಸಿರುವ ಆಯುಕ್ತರವರ ದಿನಾಂಕ 26–11–2010ರ ಟಿಪ್ಪಣಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯು ವಿಷಯದ ಸಂಖ್ಯೆ: ಸಿಆಸುಸ್ಥಾಸ/07/2010–11 ದಿನಾಂಕ 08–12–2010ರಲ್ಲಿ ಹಾಲಿ ಪೂಜ್ಯ ಮಹಾಪೌರರ ಅವಧಿಯವರೆವಿಗೂ ಶ್ರೀ.ಲಿಂಗರಾಜು ರವರ ಸೇವೆಯನ್ನು ಸಂಚಿತ ಆಧಾರದ ಮೇಲೆ ನೇಮಿಸಿಕೊಳ್ಳುವಂತೆ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ತೀರ್ಮಾನಿಸಿರುವ ನಿರ್ಣಯದ ಬಗ್ಗೆ.

**ನಿರ್ಣಯ :– ಆಯುಕ್ತರ ದಿನಾಂಕ 26–11–2010ರ ಟಿಪ್ಪಣಿಯನ್ನು ಒಪ್ಪುತ್ತಾ ಎಲ್ಲಾ ಭತ್ಯೆಗಳು ಸೇರಿ ಮಾಸಿಕ ರೂ:15,000–00 ಸಂಚಿತ ವೇತನ ನೀಡುವಂತೆ ತಿರ್ಮಾನಿಸಿದೆ.**

–3–

## 03]. ವಿಷಯದ ಸಂಖ್ಯೆ :–ತೆಆಸ್ಥಾಸ/116/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ/ಆ)ಪಿಎಸ್‌ಆರ್(4)45/10–11:ದಿನಾಂಕ:20–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ಶಿವಕುಮಾರ್ ರವರು ಪೂಜ್ಯ ಮಹಾ ಪೌರರಿಗೆ ಮನವಿ ಸಲ್ಲಿಸಿ, ತಾವು ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ಹಿಂದುಳಿದ ವರ್ಗ ಪ್ರವರ್ಗ–1 (ಉಪ್ಪಾರ ಜಾತಿ)ಕ್ಕೆ ಸೇರಿದ್ದು, ತನ್ನ ಮಗನಾದ ಶ್ರೀ ರಂಜಿತ್ ಕುಮಾರ್, ಎಸ್. (ವಿದ್ಯಾರ್ಥಿ) ರವರು ದ್ವಿತೀಯ ಪಿಯುಸಿ (ವಿಜ್ಞಾನ) ತೇರ್ಗಡೆಯಾಗಿ ರಷ್ಯ ದೇಶದ ಟ್ವೆರ್ ಸ್ಟೇರ್ ಮೆಡಿಕಲ್ ಅಕಾಡೆಮಿ ಟ್ವೆರ್ (ಮಾಸ್ಕೊ ಯುನಿವರ್ಸಿಟಿ) ಕಾಲೇಜಿನಲ್ಲಿ ಅಂಡರ್ ಗ್ರಾಜುಯೆಟ್, ಎಂ.ಡಿ. ಜನರಲ್ ಫಿಜಿಷಿಯನ್‌ನಲ್ಲಿ ಪ್ರವೇಶ ಪಡೆದು ಈಗಾಗಲೇ 3ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವುದಾಗಿ ತಿಳಿಸುತ್ತಾ, ಪಾಲಿಕೆ ವತಿಯಿಂದ ಸಹಾಯಧನ ಅಥವಾ ವಿದ್ಯಾರ್ಥಿ ಶುಲ್ಕ ಮರುಪಾವತಿಯನ್ನು ಮಂಜೂರು ಮಾಡಿ ವಿದೇಶಿ ಉನ್ನತ ವೈದ್ಯಕೀಯ ಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕೆಂದು ಮತ್ತು ಬಡ ವಿದ್ಯಾರ್ಥಿಗೆ ಉನ್ನತ ವೈದ್ಯಕೀಯ ಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕೆಂದು ತಮ್ಮ ಮಗನ ಪರವಾಗಿ ಕೋರಿರುತ್ತಾರೆ.

ಶ್ರೀಮತಿ ಸರಸ್ವತಮ್ಮ, ಪಾಲಿಕೆ ಸದಸ್ಯರು, ಜಕ್ಕಸಂದ್ರ ವಾರ್ಡ್ ನಂ. 173, ರವರು ಸಹ ಮಾನ್ಯ ಆಯುಕ್ತರಿಗೆ ಟಿಪ್ಪಣಿ ಬರೆದು ಸದರಿಯವರ ಮನವಿಯನ್ನು ಪರಿಗಣಿಸಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಬಡ ವಿದ್ಯಾರ್ಥಿಗೆ ಉನ್ನತ ವೈದ್ಯಕೀಯ ಶಿಕ್ಷಣಕ್ಕೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ವಿದ್ಯಾರ್ಥಿಗೆ ರೂ. 10,000/– (ರೂ. ಹತ್ತು ಸಾವಿರಗಳು ಮಾತ್ರ) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 20–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 04]. ವಿಷಯದ ಸಂಖ್ಯೆ :–ತೆಆಸ್ಥಾಸ/117/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)70/10–11 **ದಿನಾಂಕ 21–12–2010 ರಲ್ಲಿ ವಿವರಿಸಿರುವಂತೆ,** ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನ, ಅಲಸೂರು, ಬೆಂಗಳೂರು – 560 008. ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ಹಲಸೂರು ಶ್ರೀ ಸೋಮೇಶ್ವರ ಸ್ವಾಮಿ ದೇವಾಲಯದ ಶ್ರೀ ಕಾಮಾಕ್ಷಮ್ಮ ದೇವಿ ಪಲ್ಲಕ್ಕಿ ಮಹೋತ್ಸವ, ಬ್ರಹ್ಮರಥೋತ್ಸವ ಮತ್ತು ತೆಪ್ಪೋತ್ಸವ ಇತ್ಯಾದಿಗೆ ಪಾಲಿಕೆ ವತಿಯಿಂದ ರೂ. 10.00 ಲಕ್ಷಗಳ ಕಾಯ್ದಿರಿಸಲಾಗಿರುವ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಪ್ರಸಕ್ತ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು

ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. 76 ಸಂಘ ಸಂಸ್ಥೆಗಳ ಪೈಕಿ ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನ, ಅಲಸೂರು ರವರಿಗೆ ಕ್ರ.ಸಂ. (47) ರಲ್ಲಿ ರೂ. 10.00 ಲಕ್ಷಗಳ ಅನುದಾನವನ್ನು ನಿಗಧಿ ಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (47) ರಲ್ಲಿ ಪ್ರಸ್ತಾವಿತ ಸಂಸ್ಥೆಗೆ ನಿಗಧಿ ಪಡಿಸಲಾಗಿರುವ ರೂ. 10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 21–12–2010ರ ಟಿಪ್ಪಣಿಯನ್ನು ಒಪ್ಪಿದೆ.**



## 05]. ವಿಷಯದ ಸಂಖ್ಯೆ:–ತೆಆಸ್ಥಾಸ/118/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)97/10–11 **ದಿನಾಂಕ:21–12–2010ರಲ್ಲಿ ವಿವರಿಸಿರುವಂತೆ,** ಶ್ರೀ ಪಿ.ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು ಶ್ರೀ ನಾರಾಯಣ ರಾವ್, ಅಧ್ಯಕ್ಷರು, "ಚಾಮರಾಜಪೇಟೆ ಕನ್ನಡ ಸಾಂಸ್ಕೃತಿಕ ಕೇಂದ್ರ (ನೋ.)" ನಂ.145/21, ಡಾ: ವಿ.ಸೀತಾರಾಮಯ್ಯ ರಸ್ತೆ,(2ನೇ ಮುಖ್ಯ ರಸ್ತೆ) 3ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018.ರವರು ಪತ್ರ ಸಲ್ಲಿಸಿ ತಮ್ಮ ಸಂಸ್ಥೆಯ ಕಾರ್ಯ ಚಟುವತಿಕೆಗಳಿಗಾಗಿ ನಗರ ಪಾಲಿಕೆ ವತಿಯಿಂದ ಸಹಾಯಧನ ನೀಡಲು ಕೋರಿರುತ್ತಾರೆಂದು, ಸದರಿ ಸಂಸ್ಥೆಯ ಪತ್ರ ಲಗತ್ತಿಸಿ, ಸದರಿ ಸಂಸ್ಥೆಯವರ ಪತ್ರದಲ್ಲಿನ ಅಂಶಗಳನ್ನು ಗಮನಕ್ಕೆ ತರುತ್ತಿರುವುದಾಗಿ ತಿಳಿಸುತ್ತಾ, ಸಂಘ ಸಂಸ್ಥೆಗಳ ಅನುದಾನ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ.47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 21–12–2010ರ ಟಿಪ್ಪಣಿಯನ್ನು ಒಪ್ಪುತ್ತಾ 2010–11ರ ಆಯವ್ಯಯದ ಅನುದಾನದಲ್ಲಿ ಮೀಸಲಿಟ್ಟಿರುವ ರೂ: 2.00ಲಕ್ಷಗಳನ್ನು ಬಿಡುಗಡೆ ಮಾಡುವುದೆಂದು ತಿರ್ಮಾನಿಸಿದೆ.**

## 06]. ವಿಷಯದ ಸಂಖ್ಯೆ :–ತೆಆಸ್ಥಾಸ/119/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)90/10–11 ದಿನಾಂಕ 21–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಪಿ.ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಬೆಂಗಳೂರಿನ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾದ ಶ್ರೀ. ತಮ್ಮೇಶ್ ಗೌಡ ರವರು ನೀಡಿರುವ ಪತ್ರವನ್ನು ತಮ್ಮ ಪತ್ರದೊಂದಿಗೆ ಲಗತ್ತಿಸುತ್ತಾ, ಸದರಿಯವರು ತಮ್ಮ ಮನವಿಯಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಳೆದ 60 ವರ್ಷಗಳಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅತಿ ದೊಡ್ಡ ವಿದ್ಯಾರ್ಥಿ ಸಂಘಟನೆಯಾಗಿದ್ದು, ಈ

ಬಾರಿಯ ರಾಷ್ಟ್ರೀಯ ಅಧಿವೇಶನವನ್ನು ಬೆಂಗಳೂರು ಮಹಾನಗರದಲ್ಲಿ 2010 ರ ಡಿಸೆಂಬರ್ 20 ರಿಂದ 30 ರವರೆಗೆ ನಡೆಸುತ್ತಿರುವುದಾಗಿ ತಿಳಿಸಿ, ಈ ಅಧಿವೇಶನದಲ್ಲಿ ಶಿಕ್ಷಣ ಕ್ಷೇತ್ರದ ಸುಧಾರಣೆ, ಮತ್ತು ಶೈಕ್ಷಣಿಕ ಕ್ಷೇತ್ರದ ಹೊಸ ಆಯಾಮಗಳ ಸಾಧಕ–ಭಾದಕ, ವಿ.ವಿ.ಶಿಕ್ಷಣ, ವೃತ್ತಿ ಶಿಕ್ಷಣ, ಇತ್ಯಾದಿಗಳ ಕುರಿತಂತೆ ಶಿಕ್ಷಣ ತಜ್ಞರೊಂದಿಗೆ ಚರ್ಚೆ, ನಿರ್ಣಯ ಮಂಡನೆ, ಸಂವಾದ ಗೋಷ್ಟಿಗಳಿರುವುದಾಗಿ ತಿಳಿಸಿ, ಸದರಿ ಕಾರ್ಯಕ್ರಮದಲ್ಲಿ 10,000 ಪ್ರತಿನಿಧಿಗಳು ಪಾಲ್ಗೊಳ್ಳುತ್ತಿದ್ದು, ಸುಮಾರು ರೂ. 2.37 ಕೋಟಿ ವೆಚ್ಚವಾಗುತ್ತಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸದರಿ ಕಾರ್ಯಕ್ರಮಕ್ಕಾಗಿ ರೂ. 20.00 ಲಕ್ಷ ಧನ ಸಹಾಯ ಮಾಡಬೇಕೆಂದು ಕೋರಿರುತ್ತಾರೆಂದು ತಿಳಿಸುತ್ತಾ, ಸದರಿ ಸಂಸ್ಥೆಯವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ. 15.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 21–12–2010ರ ಟಿಪ್ಪಣಿಯನ್ನು ಒಪ್ಪುತ್ತಾ ರೂ: 15.00ಲಕ್ಷಗಳ (ಹದಿನೈದು ಲಕ್ಷ) ಅನುದಾನವನ್ನು ಬಿಡುಗಡೆ ಮಾಡುವುದೆಂದು ತೀರ್ಮಾನಿಸಿದೆ.**

–5–

## 07]. ವಿಷಯದ ಸಂಖ್ಯೆ :–ತೆಆಸ್ಥಾಸ/120/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)81/10–11 ದಿನಾಂಕ:22–12–2010ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಆದರ್ಶ ಸುಗಮ ಸಂಗೀತ ಅಕಾಡಮಿ ಟ್ರಸ್ಟ್ (ರಿ) ರವರು ನಡೆಸುತ್ತಿರುವ ಡಾ। ಸಿ. ಅಶ್ವತ್ಥ್ ಸುಗಮ ಸಂಗೀತ ಯಾತ್ರೆಯ ಸಮರೋಪ ಸಮಾರಂಭವನ್ನು ಸಹಸ್ರ ಸಹಸ್ರ ಸಂಖ್ಯೆಯ ಗಾಯಕ ಗಾಯಕಿಯರಿಂದ ಸಮೂಹ ಗಾಯನ ಹಾಗೂ ಕನ್ನಡವೇ ಸತ್ಯ ಎಂಬ ಕಾರ್ಯಕ್ರಮಗಳನ್ನು ಬಹಳ ವಿಜೃಂಭಣೆಯಿಂದ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ದಿನಾಂಕ 28–12–2010 ಮತ್ತು 29–12–2010 ರಂದು ನೆರವೇರಿಸಲಿರುವುದರಿಂದ 2010–11 ನೇ ಸಾಲಿನ ಆಯವ್ಯಯದಲ್ಲಿ ಸದರಿ ಸಂಸ್ಥೆಯ ಕಾರ್ಯಕ್ರಮಗಳಿಗಾಗಿ ರೂ. 15.00 ಲಕ್ಷಗಳನ್ನು ಕಾಯ್ದಿರಿಸಲಾಗಿರುವ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುವುದಾಗಿ ತಿಳಿಸಿ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ 2010–11 ನೇ ಸಾಲಿನ ಆಯವ್ಯಯದಲ್ಲಿ ರೂ. 15.00 ಲಕ್ಷಗಳನ್ನು ಕಾಯ್ದಿರಿಸಲಾಗಿರುವುದನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪ್ರಸಕ್ತ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. 76 ಸಂಘ ಸಂಸ್ಥೆಗಳ ಪೈಕಿ ಆದರ್ಶ ಸುಗಮ ಸಂಗೀತ ಅಕಾಡಮಿ ಟ್ರಸ್ಟ್ (ರಿ) ರವರಿಗೆ ಕ್ರ.ಸಂ. (76) ರಲ್ಲಿ ರೂ.15.00 ಲಕ್ಷಗಳ ಅನುದಾನವನ್ನು ನಿಗಧಿ ಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09-09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (76) ರಲ್ಲಿ ಪ್ರಸ್ತಾವಿತ ಸಂಸ್ಥೆಗೆ ನಿಗಧಿ ಪಡಿಸಲಾಗಿರುವ ರೂ.15.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 22–12–2010ರ ಟಿಪ್ಪಣಿಯನ್ನು ಒಪ್ಪಿದೆ.**

## 08]. ವಿಷಯದ ಸಂಖ್ಯೆ :–ತೆಆಸ್ಥಾಸ/121/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)74/10–11 ದಿನಾಂಕ 22–12–2010 ರಲ್ಲಿ ವಿವರಿಸಿರುವಂತೆ, ಡಾ|| ಸಿ. ಎನ್. ಅಶ್ವತ್ ನಾರಾಯಣ್, ಶಾಸಕರು, ಮಲ್ಲೇಶ್ವರಂ ಕ್ಷೇತ್ರ, ರವರು ಪೂಜ್ಯ ಮಹಾಪೌರರಿಗೆ ಪತ್ರ ಬರೆದು ತನ್ನ ಮತಕ್ಷೇತ್ರ ಮತ್ತೀಕೆರೆಯಲ್ಲಿರುವ ಇಂಟರ್ ನ್ಯಾಷನಲ್ ಫಿಟ್ ನೆಸ್ ಸೆಂಟರ್ ಸಂಸ್ಥೆಯ ಶ್ರೀ ದೀಪಕ್ ಕಾವೇರಪ್ಪನವರು ಸಲ್ಲಿಸಿರುವ ಮನವಿ ಮತ್ತು ದಾಖಲೆಗಳನ್ನು ತಮ್ಮ ಪತ್ರದೊಂದಿಗೆ ಲಗತ್ತಿಸಿರುವುದಾಗಿ ತಿಳಿಸಿ, ಶ್ರೀ ದೀಪಕ್ ಕಾವೇರಪ್ಪ ರವರು ಅತ್ಯುತ್ತಮ ಬಾಡಿ ಬಿಲ್ಡರ್ ಆಗಿದ್ದು, ಬೆಂಗಳೂರು ಹಾಗೂ ಇತರೆಡೆಗಳಲ್ಲಿ ನಡೆದ ಅನೇಕ ಬಾಡಿ ಬಿಲ್ಡಿಂಗ್ ಸ್ಪರ್ಧೆಯಲ್ಲಿ ಚಾಂಪಿಯನ್ ಶಿಪ್ ಪ್ರಶಸ್ತಿಗೆ ಭಾಜನರಗಿದ್ದಾರೆಂದು, ಸದರಿಯವರು ದಸರಾಶ್ರೀ ಪ್ರಶಸ್ತಿ – 2010 ಹಾಗೂ ಮಿ|| ಇಂಡಿಯಾ ಬಿರುದಿಗೂ ಪಾತ್ರರಾಗಿದ್ದು, ಈಗ ಅಲ್ಲಿ, ಜರ್ಮನಿಯಲ್ಲಿ ನಡೆಯಲಿರುವ ವರ್ಲ್ಡ್ ಬಾಡಿ ಬಿಲ್ಡಿಂಗ್ ಚಾಂಪಿಯನ್ ಶಿಪ್ಸ್ ಸ್ಪರ್ಧೆಗೆ ಆಯ್ಕೆಯಾಗಿದ್ದು, ಸದರಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ರೂ. 1,05,000/– (ಒಂದು ಲಕ್ಷದ ಐದು ಸಾವಿರ ರೂಪಾಯಿಗಳು) ರಷ್ಟು ಖರ್ಚಾಗುತ್ತಿರುವುದರಿಂದ ಪಾಲಿಕೆ ವತಿಯಿಂದ ದಯಮಾಡಿ ಸದರಿ ಕ್ರೀಡಾಪಟುವಿಗೆ ಹೆಚ್ಚಿನ ಮೊತ್ತದ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಶ್ರೀ ಜಿ. ಮಂಜುನಾಥ್ ರಾಜು ಸದಸ್ಯರು, ವಾರ್ಡ್ –65 ರವರು ಸಹ ಸದರಿ ಕ್ರೀಡಾಪಟುವಿಗೆ ಪಾಲಿಕೆ ವತಿಯಿಂದ ಧನ ಸಹಾಯ ಮಂಜೂರು ಮಾಡಲು ಕೋರಿರುತ್ತಾರೆ.



ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಕ್ರೀಡಾಪಟುವಿಗೆ ರೂ. 10,000/– (ರೂ. ಹತ್ತು ಸಾವಿರಗಳು ಮಾತ್ರ) ಗಳಂತೆ ಸಹಾಯ ಧನವನ್ನು ಮಂಜೂರು ಮಾಡುಲು ಅವಕಾಶವಿರುತ್ತದೆ. ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ 22–12–2010ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ:50,000–00 (ಐವತ್ತು ಸಾವಿರ ಮಾತ್ರ) ಸಹಾಯಧನ ಬಿಡುಗಡೆ ಮಾಡುವುದೆಂದು ತೀರ್ಮಾನಿಸಿದೆ.**

## 09]. ವಿಷಯದ ಸಂಖ್ಯೆ :–ತೆಆಸ್ಥಾಸ/122/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)75/10–11, ದಿನಾಂಕ: 22–12–2010 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಸಪ್ತ ಸ್ವರ ಆರ್ಟ್ಸ್ & ಕ್ರಿಯೇಷನ್ (ರಿ) ಸಂಸ್ಥೆ, ಸಪ್ತಸ್ವರ, ನಂ. 139, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಭುವನೇಶ್ವರಿ ನಗರ, ಮರಿಯಪ್ಪನ ಪಾಳ್ಯ, ಜ್ಞಾನ ಭಾರತಿ ಅಂಚೆ, ಬೆಂಗಳೂರು – 560 056. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಸುಮಾರು 12 ವರ್ಷಗಳಿಂದ 7 ದಿನಗಳ ಕಾಲ ನಗರದ ರವೀಂದ್ರ ಕಲಾಕ್ಷೇತ್ರ ಮತ್ತು ಸಂಸ ಬಯಲು ರಂಗ ಮಂದಿರಗಳಲ್ಲಿ ವಿವಿಧ ಪ್ರಕಾರಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಚರಿಸಿಕೊಂಡು, ಜನ ಮೆಚ್ಚುಗೆಯನ್ನು ಗಳಿಸುತ್ತಾ ಬಂದಿರುವುದಾಗಿ ತಿಳಿಸಿ, ಇನ್ನೂ ಹಲವಾರು ಕ್ಷೇತ್ರಗಳಲ್ಲಿಯೂ ಸಹ ಸೇವೆ ಸಲ್ಲಿಸುತ್ತಾ ಬಂದಿರುವ ಸಂಸ್ಥೆಯು ಸಂಕ್ರಮಣ – 2011 ಎಂಬ

ನಾಮಾಂಕಿತದಡಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಸದರಿ ಕಾರ್ಯಕ್ರಮಕ್ಕೆ ಸುಮಾರು ರೂ. 9.00 ಲಕ್ಷ ವೆಚ್ಚವಾಗಲಿದ್ದು, ಪಾಲಿಕೆ ವತಿಯಿಂದ ಸೂಕ್ತ ಅನುದಾನವನ್ನು ಕೋರಿರುತ್ತಾರೆಂದು ತಿಳಿಸಿ, ಸದರಿ ಸಂಸ್ಥೆಯವರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ರೂ. 1.00 ಲಕ್ಷಗಳ ಹಣ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಶ್ರೀ ಹೆಚ್. ರವೀಂದ್ರ, ಮಾನ್ಯ ಅಧ್ಯಕ್ಷರು, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ರವರು ಸದರಿ ಸಂಸ್ಥೆ ಕಲಾ ಸೇವೆಯನ್ನು ಪರಿಗಣಿಸಿ ಸಂಸ್ಥೆಯ ಅಭಿವೃದ್ಧಿಗೆ ರೂ. 1.00 ಲಕ್ಷಗಳ ಧನ ಸಹಾಯವನ್ನು ಮಂಜೂರು ಮಾಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 47.85 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 1.00 ಲಕ್ಷ (ರೂ. ಒಂದು ಲಕ್ಷ ಮಾತ್ರ) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 22–12–2010ರ ಟಿಪ್ಪಣಿಯನ್ನು ಒಪ್ಪಿದೆ.**

**(ಪಿ.ಎನ್.ಸದಾಶಿವ)**
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ